ISO
9001 & 14001
Certified Company

multiplex®

MULTIPLEX FARMER
HAPPY FARMER

# ಜಿಂಜರ್ ಸ್ಪೆಷಲ್

## ಶುಂಠಿ ಬೆಳೆಗಾಗಿ




*Farmers' first choice since 1974*

# ಮಲ್ಟಿಪ್ಲೆಕ್ಸ್ ಜಿಂಜರ್ ಸ್ಪೆಷಲ್

ಶುಂಠಿ ಬೆಳೆಯು ಚನ್ನಾಗಿ ನೀರು ಬಸಿದುಹೋಗುವ ಮರಳು ಮಿಶ್ರಿತ ಮಣ್ಣಿನಲ್ಲಿ ಬೆಳೆಯಬಹುದು. ಮಣ್ಣಿನ ರಸಸಾರ 7.0 ಕ್ಕಿಂತ ಕಡಿಮೆ ಇರುವ ಮಣ್ಣು ಇದಕ್ಕೆ ಉತ್ತಮ. ಶುಂಠಿ ಎಲೆಗಳಲ್ಲಿ ಶೇಕಡಾ 0.4 ರಷ್ಟು ಸಲ್ಫರ್, 1.2–2.0 ಶೇಕಡಾ ಕ್ಯಾಲ್ಸಿಯಂ ಮತ್ತು 0.5–0.8 ಶೇಕಡಾ ಮೆಗ್ನೀಷಿಯಂ ಇದೆ. ಲಘು ಪೋಷಕಾಂಶಗಳ ವಿಚಾರ ಬಂದಲ್ಲಿ ಶುಂಠಿಯಲ್ಲಿ ಮ್ಯಾಂಗನೀಸ್, ಬೋರಾನ್, ಕಬ್ಬಿಣ, ಸತು, ತಾಮ್ರ ಮತ್ತು ಮಾಲಿಬ್ಡಿನಂ ಕಡಿಮೆ ಇರುತ್ತದೆ. ಬೆಳೆ ಪುನರಾವರ್ತನೆ ಮಾಡುತ್ತಿರುವುದರಿಂದ ಸಸ್ಯಗಳಿಗೆ ಲಘುಪೋಷಕಾಂಶಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಮ್ಯಾಂಗನೀಸ್ ಮತು ಬೋರಾನ್‌ನಂತಹ ಒಂದೆರಡು ಪೋಷಕಾಂಶಗಳನ್ನು ಸಸ್ಯಗಳು ಹೀರಿಕೊಳ್ಳಬಹುದೇ ಹೊರತು ರೈತರು ಎಲ್ಲಾ ಪೋಷಕಾಂಶಗಳನ್ನು ಮರು ಪೂರೈಕೆ ಮಾಡುವುದಿಲ್ಲವಾದ್ದರಿಂದ ಸಸ್ಯಗಳು ಸೊರಗುತ್ತವೆ.

ಶುಂಠಿ ಬೆಳೆಗೆ ಬೇಕಾದ ಪೋಷಕಾಂಶಗಳ ಕುರಿತು ಮಾತನಾಡುವುದಾದರೆ, ರೈತರು ಕೇವಲ ಸಾರಜನಕ ರಂಜಕ ಪೊಟ್ಯಾಷ್ ಪೋಷಕಾಂಶಗಳನ್ನು ಹೆಚ್ಚಿನದಾಗಿ ಪೂರೈಸುತ್ತಿದ್ದಾರೆ, ಇದರ ಬಗೆಗಷ್ಟೇ ರೈತರು ಅರಿತಿದ್ದಾರೆ. ಇದರಿಂದ ಸಸ್ಯಗಳು ಮಧ್ಯಮ ಹಾಗೂ ಲಘು ಪೋಷಕಾಂಶಗಳನ್ನು ಅಗತ್ಯ ಪ್ರಮಾಣದಲ್ಲಿ ಪಡೆಯುತ್ತಿಲ್ಲ. ಬೆಳೆಯ ಅವಧಿ ಹೆಚ್ಚಿರುವುದರಿಂದ ಎಲ್ಲಾ ಪೋಷಕಾಂಶಗಳು ಅಗತ್ಯ ಪ್ರಮಾಣದಲ್ಲಿ ಸಿಗುವಂತಾದಾಗ ಮಾತ್ರ ಉತ್ತಮ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯಲು ಸಾಧ್ಯ. ಪೋಷಕಾಂಶಗಳ ಕೊರತೆಯಿಂದಾಗಿ ಶುಂಠಿ ಬೆಳೆ ಅನೇಕ ರೋಗಗಳಿಗೆ ತುತ್ತಾಗುತ್ತದೆ ಇದರಿಂದ ಉತ್ಪಾದಕತೆ ಹಾಗೂ ಗುಣಮಟ್ಟದ ಮೇಲೆ ಹೊಡೆತ ಬೀಳುತ್ತದೆ.

**ಶುಂಠಿ ಬೆಳೆಗಾಗಿ ಮಲ್ಟಿಪ್ಲೆಕ್ಸ್ ಜಿಂಜರ್ ಸ್ಪೆಷಲ್:**

ಮಲ್ಟಿಪ್ಲೆಕ್ಸ್ ಜಿಂಜರ್ ಉತ್ಪನ್ನವು ಲಘುಪೋಶಕಾಂಶಗಳ ವೈಜ್ಞಾನಿಕ ಮಿಶ್ರಣ. ಈ ಉತ್ಪನ್ನ ಬಳಸುವುದರಿಂದ ಗುಣಮಟ್ಟದ ಉತ್ತಮ ಇಳುವರಿ ಪಡೆಯಬಹುದು.

ಇದರಲ್ಲಿ ಕರ್ನಾಟಕ ಸರ್ಕಾರ ರಸಗೊಬ್ಬರಗಳ ನಿರ್ವಹಣಾ ಮಂಡಳಿಯ ಶಿಫಾರಸ್ಸಿನಂತೆ ಲಘುಪೋಷಕಾಂಶಗಳಾದ ಮ್ಯಾಂಗನೀಸ್, ಬೋರಾನ್, ಕಬ್ಬಿಣ, ಸತು, ತಾಮ್ರ ಮತ್ತು ಮಾಲಿಬ್ಡಿನಂ ಈ ಬೆಳೆಗೆ ಬೇಕಾದ ಪ್ರಮಾಣದಲ್ಲಿ ಮಿಶ್ರಣ ಮಾಡಲಾಗಿದೆ. ಶುಂಠಿ ಬೆಳೆಯಲಿ ಉತ್ಪಾದನೆ ಹೆಚ್ಚಿಸಲು ವಿಜ್ಞಾನಿಗಳ ಸಲಹೆ ಹಾಗೂ ಪ್ರಗತಿಪರ ರೈತರ ಅನುಭವವನ್ನಾಧರಿಸಿ ಅಭಿವೃದ್ಧಿಪಡಿಸಲಾದ ಮಹತ್ವದ ಉತ್ಪನ್ನವಿದು. ಈ ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುವ ಮುನ್ನ ರೈತರ ಹೊಲಗಳಲ್ಲಿ ಪರೀಕ್ಷಿಸಿ ಅವರ ನಿರೀಕ್ಷೆ ಹಾಗೂ ಅಪೇಕ್ಷೆಯಂತೆಯೇ ಮಾರುಕಟ್ಟೆಗೆ ಪರಿಚಯಿಸಿಲಾಗಿದೆ.

## ಉಪಯೋಗಗಳು

- ಶುಂಠಿ ಬೆಳೆ ಸಾಮಾನ್ಯವಾಗಿ ಹುಳಿ ಮಣ್ಣಿನಲ್ಲಿ ಬೆಳೆಯುತ್ತಿದ್ದು ಮೇಲುಗೊಬ್ಬರವಾಗಿ ಮಲ್ಟಿಪ್ಲೆಕ್ಸ್ ಜಿಂಜರ್ ಉತ್ಪನ್ನವನ್ನು ಕೊಡುವುದರಿಂದ ಇದರಲ್ಲಿರುವ ಲಘುಪೋಷಕಾಂಶಗಳು ದ್ವಿತಿಸಂಶ್ಲೇಷಣ ಕ್ರಿಯೆಯನ್ನು ಹೆಚ್ಚಿಸಿ ಮಣ್ಣಿನಲ್ಲಿರುವ ಇತರೆ ಪೋಷಕಾಂಶಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.
- ಮಲ್ಟಿಪ್ಲೆಕ್ಸ್ ಜಿಂಜರ್ ಉತ್ಪನ್ನದಲ್ಲಿ ಮಾಲಿಬ್ಡಿನಂ ಇರುವುದರಿಂದ ಸಾರಜನಕದ ಬಳಕೆಯನ್ನು ಹೆಚ್ಚಿಸುವುದರಿಂದ ಸಸ್ಯದ ಬೆಳವಣಿಗೆ ವೃದ್ಧಿಸುವುದಲ್ಲದೆ ಶುಂಠಿ ಗಡ್ಡೆಯ ಗಾತ್ರದಲ್ಲಿ ಗಣನೀಯವಾದ ಬೆಳವಣಿಗೆಯನ್ನು ಕಾಣಬಹುದು.
- ಶುಂಠಿಯಲ್ಲಿ ಸಸ್ಯ ಬೆಳೆವಣಿಗೆಯ ಸಮಯದಲ್ಲಿ ಮಣ್ಣಿನಲ್ಲಿರುವ ಕಬ್ಬಿಣದಂಶವನ್ನು ಮಣ್ಣಿನ ರಾಸಾಯನಿಕ ಬದಲಾವಣೆಗಳಿಂದ ಬಳಸಿಕೊಳ್ಳಲಾಗದೆ ಸಸಿಯ ಬೆಳವಣಿಗೆಯ ಸಮಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಬ್ಬಿಣದ ನ್ಯೂನತೆಯನ್ನು ಕಾಣುತ್ತೇವೆ. ಈ ನ್ಯೂನತೆಯಿಂದ ಬೆಳೆವಣಿಗೆ ಏರುಪೇರಾಗುವುದು ಸಾಮಾನ್ಯ. ಆದ್ದರಿಂದ ಮಲ್ಟಿಪ್ಲೆಕ್ಸ್ ಜಿಂಜರ್ ಉತ್ಪನ್ನವನ್ನು ಮೇಲುಗೊಬ್ಬರವಾಗಿ ಬಳಸುವುದರಿಂದ ಕಬ್ಬಿಣದ ನ್ಯೂನತೆಯಿಂದ ಸಸಿಗಳನ್ನು ಮುಕ್ತವಾಗಿಡುವುದರಿಂದ ಸದಾ ಹಸಿರಾಗಿ ಕಾಣುತ್ತದೆ.
- ವಾತಾವರಣದ ವ್ಯತ್ಯಾಸದಲ್ಲಿಯೂ ಸಸಿ ಮತ್ತು ಶುಂಠಿಯ ಗಡ್ಡೆಯಲ್ಲಿ ಸದಾ ತೇವಾಂಶವನ್ನು ತಡೆದಿಡುವ ಶಕ್ತಿಯನ್ನು ಈ ಉತ್ಪನ್ನದಲ್ಲಿರುವ ಬೋರಾನ್ ವೃದ್ಧಿಸುವುದಲ್ಲದೆ ಇಳುವರಿಯಲ್ಲಿ ಗಣನೀಯವಾದ ಬೆಳವಣಿಗೆಯನ್ನು ಕಾಣಬಹುದು.
- ಮೇಲುಗೊಬ್ಬರವಾಗಿ ಬೋರಾನ್‌ಅನ್ನು ಬೆಳೆಗೆ ಮಲ್ಟಿಪ್ಲೆಕ್ಸ್ ಜಿಂಜರ್ ಸ್ಪೆಷಲ್ ಉತ್ಪನ್ನದ ಮುಖಾಂತರ ನೀಡುವುದರಿಂದ ಶುಂಠಿಯ ಗಡ್ಡೆಯ ಸಿಪ್ಪೆ ಕಿತ್ತು ಬರದೆ ಗಟ್ಟಿಯಾಗಿರುವುದಲ್ಲದೆ ಗಡ್ಡೆಯ ಹೊಳಪನ್ನು ಹೆಚ್ಚಿಸುತ್ತದೆ.
- ಮಲ್ಟಿಪ್ಲೆಕ್ಸ್ ಜಿಂಜರ್ ಉತ್ಪನ್ನವನ್ನು ಬೆಳೆಗೆ ಬಳಸುವುದರಿಂದ ಶುಂಠಿ ಬೆಳವಣಿಗೆಯ ಸಮಯದಲ್ಲಿ ಸೈಟೋಕೈನಿನ್ ಪ್ರಚೋದಕದ ಉತ್ಪಾದಕತೆಯನ್ನು ಹೆಚ್ಚಿಸಿ ಗಡ್ಡೆಯ ಕವಲಿಗಳ ಸಂಖ್ಯೆಯನ್ನು ಹೆಚ್ಚಿಸುತ್ತದೆ.
- ಮಲ್ಟಿಪ್ಲೆಕ್ಸ್ ಜಿಂಜರ್ ಸ್ಪೆಷಲ್ ಉತ್ಪನ್ನ ಬಳಸುವುದರಿಂದ ಬೆಳೆಯಲ್ಲಿ ರೋಗನಿರೋಧಕ ಶಕ್ತಿ ವೃದ್ಧಿಸುವುದರ ಜೊತೆಗೆ ಗುಣಮಟ್ಟದ ಹೆಚ್ಚಿನ ಇಳುವರಿ ಪಡೆಯಬಹುದು.

## ಬಳಸಬೇಕಾದ ಸಮಯ

- ಗಡ್ಡೆ ಬಿತ್ತನೆ ಮಾಡುವ ಸಮಯದಲ್ಲಿ ಇತರೆ ಗೊಬ್ಬರದ ಜೊತೆಗೆ 8 ಕೆ.ಜಿ ಬಳಸಬೇಕು.
- ಗಡ್ಡೆ ನಾಟಿ ಮಾಡಿದ 3 ತಿಂಗಳ ನಂತರ ಗೊಬ್ಬರಗಳ ಜೊತೆಯಲ್ಲಿ 8 ಕೆ.ಜಿ ಪ್ರತಿ ಎಕರೆಗೆ ಬಳಸಬೇಕು.
- ಗಡ್ಡೆ ನಾಟಿ ಮಾಡಿದ 5 ತಿಂಗಳ ನಂತರ ಗೊಬ್ಬರಗಳ ಜೊತೆಯಲ್ಲಿ 8 ಕೆ.ಜಿ ಪ್ರತಿ ಎಕರೆಗೆ ಕೊಟ್ಟು ಮೇಲ್ಮಣ್ಣನ್ನು ಕೊಡಬೇಕು.

**ದೊರೆಯುವ ಪ್ರಮಾಣ:** 8 ಕೆ.ಜಿ. ಬ್ಯಾಗ್

ತಯಾರಕರು

**ಕರ್ನಾಟಕ ಆಗ್ರೋ ಕೆಮಿಕಲ್ಸ್**

#180, 1ನೇ ಮುಖ್ಯರಸ್ತೆ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು – 560 086. ಭಾರತ

ಫೋ: 080 – 23494406, 23497360, 23497464

ಇಮೇಲ್: multiplex@multiplexgroup.com ವೆಬ್‌ಸೈಟ್: www.multiplexgroup.com